ANUBHAVS



# ದೀನ ದಯಾಳು ಬಾಪೂವನ್ನೇ ಸ್ಮರಿಸಿ

© Copyright 2010, Manasamarthyadata.com

manasamarthyadata.com



- ಸೌ. ಪುಷ್ಪಾ ಪವಾರ್, ಮಾನಖುರ್ದ್

ನಾನು ಸಾಯನ್ ಪೆರಪ್ಲಾಜಿಕ್ ಫೌಂಡೇಶನ್‌ನಲ್ಲಿ ಕೆಲಸಕ್ಕಿದ್ದೇನೆ. ನಾನು ಹಾಗೂ ನನ್ನ ಪತಿ ಇಬ್ಬರೂ ಅಂಗವಿಕಲರಾಗಿದ್ದೇವೆ. ಮುಂಚೆ ನಾವು ರೈಲ್ವೆಯ ಸ್ಥಳದಲ್ಲಿ ಗುಡಿಸಲಿನಲ್ಲಿ ವಾಸಿಸುತ್ತಿದ್ದೇವು. ಒಮ್ಮೆ ನನ್ನ ತಂದೆಗೆ ಹುಶಾರಿಲ್ಲದ ಕಾರಣ ನಾವು ಅವರನ್ನು ನೋಡಲು ಅವರಲ್ಲಿಗೆ ಹೋಗಿದ್ದೆವು. ಹಿಂತಿರುಗಿ ಬಂದು ನೋಡಿದಾಗ ನಮ್ಮೆಲ್ಲಾ ಗುಡಿಸಲುಗಳನ್ನು ನೆಲಸಮ ಮಾಡಿದ್ದರು. ನನ್ನ ಹತ್ತಿರ  ರೇಶನ್ ಕಾರ್ಡ್ ಹಾಗೂ ಮತದಾನದ ಚೀಟಿ ಇತ್ತು. ಆದರೆ, ಗುಡಿಸಲಿನ ಫೋಟೋಪಾಸ್ ಹಾಗೂ ಲೈಸೆನ್ಸ್ ಮಾತ್ರ ಕಳೆದು ಹೋಗಿತ್ತು. ಬೇರೆಯವರಿಗೆ ತಾತ್ಕಾಲಿಕವಾಗಿ ನಿಲ್ಲಲು ಮನೆಯನ್ನು ಕೊಟ್ಟರು. ಆದರೆ, ನಮಗೆ ಮಾತ್ರ ಸಿಗಲಿಲ್ಲ.

ನಾನು ಹಾಗೂ ನನ್ನ ಪತಿ ಮ್ಹಾಡದ ಆಫೀಸಿಗೆ ಹೋಗಿ ಅಲ್ಲಿಯ ಅಧಿಕಾರಿಗಳಿಗೆ ಎಲ್ಲಾ ವಿಷಯವನ್ನು ಹೇಳಿದೆವು. ಅದನ್ನು ಕೇಳಿ ಅವರು ಮಾನಖುರ್ದ್‌ನ ಒಂದು ಚಾಳಿಯಲ್ಲಿ ನಮಗೆ ಉಳಕೊಳ್ಳಲು ಸ್ಥಳವನ್ನು ಕೊಟ್ಟರು. ಸ್ವಲ್ಪ ದಿನಗಳ ನಂತರ ಅವರು ನಮ್ಮ ಗುಡಿಸಲಿನ ಫೋಟೋಪಾಸ್ ಹಾಗೂ ಸರ್ವೆ ನಂಬರ್‌ನ್ನು ಕೊಡಲು ಹೇಳಿದರು. ಆದರೆ ಅದು ನಮ್ಮ ಹತ್ತಿರ ಇರಲಿಲ್ಲ. ಸಾಕಷ್ಟು ಪುರಾವೆಗಳಿಲ್ಲದೆ ನಾವು ತುಂಬಾ ಚಿಂತಿತರಾಗಿದ್ದೆವು.

ನಮ್ಮ ಪೆರಪ್ಲಾಜಿಕ್ ಫೌಂಡೇಶನ್‌ಗೆ ಅನಿರುದ್ಧ ಉಪಾಸನಾ ಕೇಂದ್ರದ ಬಾಪೂ ಭಕ್ತ ಮಹಿಳೆಯರು ಸೇವೆಗಾಗಿ ಬರುತ್ತಿದ್ದರು. ಅವರು ಆಗಾಗ ಬಾಪೂರವರ ಕಾರ್ಯದ ಬಗ್ಗೆ ಹಾಗೂ ಭಕ್ತಿಯ ಮಹತ್ವದ ಬಗ್ಗೆ ಹೇಳುತ್ತಲ್ಲೇ ಇದ್ದರು. ಅದರಿಂದಾಗಿ ನಮಗೆ ಸಾಕಷ್ಟು ಮಾನಸಿಕ ಸಾಮರ್ಥ್ಯವು ಸಿಗುತ್ತಿತ್ತು. ಅವರು ನಮ್ಮೊಂದಿಗೆ ಅನಿರುದ್ದ ಚಲೀಸಾದ ಪಠಣೆ, ಅನಿರುದ್ಧ ಪಾಠದ ಪಠಣೆ, ಅನಿರುದ್ಧ ಉಪಾಸನೆ ಹಾಗೂ ಚಿದಾನಂದ ಉಪಾಸನೆಯನ್ನು ಮಾಡುತ್ತಿದ್ದರು. ಸತ್ಯ, ಪ್ರೇಮ, ಆನಂದಕ್ಕೆ ಅನುಸರಿಸಿ ಶುದ್ಧ ಭಾವದಿಂದ ಬಾಪೂವನ್ನು ಸ್ಮರಿಸಿದರೆ ಅವರು ಬೇಡಿದುದನ್ನು ಕೊಡುತ್ತಾರೆ ಎಂದು ಅವರು ಯಾವಾಗಲೂ ಹೇಳಿತ್ತಿದ್ದರು.

ನಮಗೆ ಹೊಸ ಮನೆ ಸಿಗಬೇಕು ಎಂಬ ಇಚ್ಛೆಯಿಂದ ನಾನು ಮನದಲ್ಲಿಯೇ ನಾಮಸ್ಮರಣೆಯನ್ನು ಶುರು ಮಾಡಿದೆ. ನಾನು ಹಾಗೂ ನನ್ನ ಪತಿ ನಮ್ಮ ಮೂವರು ಮಕ್ಕಳೊಂದಿಗೆ ಬಾಂದ್ರಾದಲ್ಲಿ ಪ್ರತೀ

ಗುರುವಾರ ನಡೆಯುವ ಪ್ರವಚನಕ್ಕೆ ಹೋದೆವು. ಅದರ ನಂತರ ನನಗೆ ಯಾವಾಗಲೊಮ್ಮೆ ಬಾಪೂ ಸ್ವಪ್ನದಲ್ಲಿ ಬರುತ್ತಿದ್ದರು. ಕೆಲಸಕ್ಕೆ ಹೋಗುವಾಗ ಹಾಗೂ ಬರುವಾಗ ರೈಲಿನಲ್ಲಿ ಬಾಪೂ ಅವರ ಉಪಾಸನೆಯ ಪುಸ್ತಕವನ್ನು ಓದುತ್ತಿದ್ದೆನು.

ಒಂದು ದಿನ ಮನೆ ವಿಷಯವಾಗಿ ಮಾತನಾಡಲು ನಮ್ಮನ್ನು ಆಫೀಸಿಗೆ ಕರೆದರು. ಅಲ್ಲಿ ನಮಗಿಂತ ಮುಂಚೆ ಬಂದ ಒಬ್ಬ ಮಹಿಳೆಗೆ ಅಲ್ಲಿಯ ಆಫೀಸರ್ ಒಬ್ಬರು ಜೋರಾಗಿ ಕೋಪದಿಂದ ಮಾತನಾಡುತ್ತಿದ್ದರು. ಅದನ್ನು ನೋಡಿ ನಾನು ಗಾಬರಿಯಾದೆ ಹಾಗೂ ಮನಸ್ಸಿನಲ್ಲಿಯೇ ಬಾಪೂವನ್ನು ಸ್ಮರಿಸಿದೆ. ಆದರೆ, ನನ್ನ ಹತ್ತಿರ ಮಾತ್ರ ಅವರು ತುಂಬಾ ಶಾಂತವಾಗಿ ಮಾತನಾಡಿದರು. ಪುರಾವೆ ಸರಿಯಿಲ್ಲದ ಕಾರಣ ಬೇರೊಂದು ಅಧಿಕಾರಿಯನ್ನು ನೋಡಿ ಮಾತನಾಡಲು ಸೂಚಿಸಿದರು. ನಾನು ಸತತವಾಗಿ ಬಾಪೂವನ್ನೇ ಸ್ಮರಿಸುತ್ತಿದ್ದೆ. ಆ ಬೇರೆ ಅಧಿಕಾರಿಯವರು ನಾವು ಇದ್ದ ಸ್ಥಳದಲ್ಲಿಯೇ ನಿಲ್ಲಲು ಹೇಳಿದರು.

ಹಳೆ ಮನೆಯ ಫೋಟೋಪಾಸ್ ಇಲ್ಲದ ಕಾರಣ ಸರಕಾರದಿಂದ ಸಿಗುವ ಹೊಸ ಸ್ಥಳದಲ್ಲಿ ನಾವು ಯಾವ ಸೊಸೈಟಿಯಲ್ಲಿ ಇರಬೇಕು ಎಂದು ನಿರ್ಣಯವಾಗುತ್ತಲ್ಲೇ ಇರಲಿಲ್ಲ. ಅಲ್ಲಿಯ ಅಧಿ ಕಾರಿಗಳು ನಾವು ಸಧ್ಯಕ್ಕಿರುವ ಮನೆಯ ಫೋಟೋವನ್ನು ತರಲು ಹೇಳಿದರು. ನಾವು ಅದನ್ನು ಕೊಟ್ಟೆವು. ನಂತರ ನಮ್ಮ ಹಳೆಯ ಗುಡಿಸಲಿನ ಫೋಟೋಪಾಸ್ ಹಾಗೂ ಕಾಗದ ಪತ್ರಗಳು ನಮಗೆ ಆಕಸ್ಮಾತ್ತಾಗಿ ಸಿಕ್ಕಿದವು. ಅದನ್ನು ನೋಡಿ ನಮಗೆ ತುಂಬಾ ಆಶ್ಚರ್ಯವಾಯಿತು ಹಾಗೂ ಇದು ಬಾಪೂರವರ ಲೀಲೆಯೇ ಎಂದು ಖಾತ್ರಿ ಆಯಿತು.

ಸಂಬಂಧಿತ ಅಧಿಕಾರಿಗಳಿಗೆ ಅದನ್ನು ತೋರಿಸಿದಾಗ ಸೊಸೈಟಿಯ ನಂಬರಿಗೋಸ್ಕರ 2,000 ರೂ.ಗಳನ್ನು ತುಂಬಲು ಹೇಳಿದರು. ಆದರೆ, ನಮ್ಮ ಹತ್ತಿರ ಕೇವಲ 1,200 ರೂ. ಮಾತ್ರ ಇತ್ತು. ನಾವು ಚಿಂತಿತರಾದೆವು. ಆಗ ನಾನು ನನ್ನ ಪತಿಯವರಿಗೆ ಹೇಳಿದೆ ‘‘ಬಾಪೂ ಎಲ್ಲವನ್ನು ಒಳ್ಳೆಯದಾಗಿಯೇ ಮಾಡುತ್ತಾರೆ. ನಮ್ಮ ಸಮಸ್ಯೆಯನ್ನು ಅವರೇ ಬಗೆ ಹರಿಸುತ್ತಾರೆ’’ ನನ್ನ ಹಣದ ಅವಶ್ಯಕತೆಯನ್ನು ನಾನು ಅಲ್ಲಿ ಕೆಲಸ ಮಾಡುವ ಪಾಟೀಲ್ ಮೇಡಮ್ ಅವರ ಹತ್ತಿರ ಹೇಳಿದೆ. ಆಗ ಅವರು ಒಬ್ಬ ದಾನಿಯಿಂದ ನನಗೆ 1,000 ರೂ.ಗಳನ್ನು ಕೊಡಿಸಿದರು.

ಹಣ ತುಂಬಿಸಿದ ನಂತರ ಒಂದು ಗುರುವಾರ ನನಗೆ ಮನೆಯ ನಂಬರ್ ಸಿಕ್ಕಿತು. ಒಂದು ತಿಂಗಳಿನ ನಂತರ ರೂಮಿನ ಬೀಗದ ಕೈ ಸಿಕ್ಕಿತು. ರೂಮು ಸಿಕ್ಕಿದ ನಂತರ ನನ್ನ ಗಂಡ ಹಾಗೂ ಮಕ್ಕಳು



ಆನಂದಿತರಾದರು. ಇವೆಲ್ಲಾ ಬಾಪೂರವರ ಕೃಪಾದೃಷ್ಟಿಯಿಂದಲೇ ಆಯಿತು ಎಂದು ನಾನು ಅವರಿಗೆ ಹೇಳಿದೆ.

ಹೀಗೆ ಸದ್ಗುರು ಬಾಪೂರವರ ಕೃಪೆಯು ನಮ್ಮ ಮೇಲೆ ಸದಾಕಾಲ ಇರಲಿ ಎಂದು ಅವರ ಚರಣಕಮಲಗಳಲ್ಲಿ ಪ್ರಾರ್ಥಿಸುತ್ತೇನೆ.

ANUBHAVS

# HARI OM

© Copyright 2010, Manasamarthyadata.com

manasamarthyadata.com